ಶಿಕ್ಷಣದಿಂದ ಶ್ರೇಷ್ಠತೆ
ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)
(ಮೈಸೂರು ವಿಶ್ವವಿದ್ಯಾನಿಯದಿಂದ ಸಂಯೋಜನೆಗೊಂಡು ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ)
ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು
ಜಯಲಕ್ಷ್ಮೀಪುರಂ, ಮೈಸೂರು-570 012

ದಿನಾಂಕ: 1-2-2020

ಇಂಡಿಯಾ ಜಪಾನ್ ಸ್ನೇಹ ದಿನಾಚರಣೆ

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ 1.2.2020ರಂದು ಇಂಡಿಯಾ ಜಪಾನ್ ಸ್ನೇಹÀ ದಿನಾಚರಣೆ - ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮವನ್ನು ಆಚರಿಸಲಾಯಿತು. "

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಮಿತ್ಸುಹಿರೋ ಅಮಾ ವೋ, ಉಪ ರಾಯಭಾರಿ, ಸಾಮಾನ್ಯ ವ್ಯವಹಾರಗಳ/ರಾಜಕೀಯ ಆರ್ಥಿಕ ಮತ್ತು ಸಾಂಸ್ಕøತಿಕ ಭದ್ರತೆ, ಜಪಾನ್ ದೂತವಾಸ, ಬೆಂಗಳೂರು, ಭಾರತ. ಇವರು ಭಾರತ ಮತ್ತು ಜಪಾನಿನ ಪ್ರೀತಿ - ಭಾಂದವ್ಯವನ್ನು ಇನ್ನಷ್ಟು ಹೆಚ್ಚಿಸಲು ಈ ಕಾರ್ಯಕ್ರಮ ಪೂರಕವಾಯಿತು. ಇವರು ಮೈಸೂರು ಕುರಿತು ಹೊಗಳಿಕೆಯ ಮಾತುಗಳನ್ನಾಡಿದರು. ನಮ್ಮ ನಿಮ್ಮ ಸ್ನೇಹ ಹೀಗೆ ಇರಲಿ ಎಂಬ ಆಶಯವನ್ನು ವ್ಯಕ್ತ ಪಡಿಸಿದರು.

ಶ್ರೀ ಹಿರೊಯುಕಿ ಇಶಿದ, ಪ್ರಧಾನ ವ್ಯವಸ್ಥಾಪಕರು, ಏಜೆಂಟ್. ಹಿನಸಿ, ಟೋಕಿಯೊ, ಇವರು ಮಾತನಾಡುತ್ತ ಭಾರತದ ಸಂಸ್ಕøತಿ ನಮ್ಮ ಸಂಸ್ಕøತಿಗಿಂತ ಭಿನ್ನವಾಗಿದೆ. ಈ ಸುಂದರ ಕ್ಷಣಗಳನ್ನು ಭಾರತೀಯರ ಜೋತೆ ಸವಿಯುವುದೇ ನಮ್ಮ ಅದೃಷ್ಟ, ಸಂಪ್ರದಾಯ ಸಂಸ್ಕøತಿಯಲ್ಲಿ ಭಾರತ ಮುಂದಿದೆ ಎಂದು ಅಭಿಪ್ರಾಯಪಟ್ಟರು.

ಪ್ರಮೋದ್ ವೆದುರ್ಮುದಿ ಇವರು ಮಾತನಾಡುತ್ತ ಭಾರತ ಮತ್ತು ಜಪಾನ್ ಹೆಚ್ಚು ಕಡಿಮೆ ಎಲ್ಲಾ ಕ್ಷೇತ್ರದಲ್ಲೂ ಒಂದೇ ರೀತಿಯಲ್ಲಿದೆ. ಕೆಲವೇ ಕ್ಷೇತ್ರಗಳಲ್ಲಿ ವಿಭಿನ್ನವಾಗಿದೆ, ಅ ವಿಭಿನ್ನ ಪ್ರಕಾರಗಳನ್ನು ತಿಳಿಯಲು ಜಪಾನ್‌ಗೆ ಒಮ್ಮೆ ಭೇಟಿ ನೀಡಿ ನಮ್ಮ ವ್ಯವಹಾರ ಕ್ಷೇತ್ರಗಳ ಕರಿತು ಅರಿತುಕೋಳ್ಳಬಹುದು ಎಂದು ಅಭಿಪ್ರಾಯ ಪಟ್ಟರು.

ಕಾಲೇಜಿನ ಗೌರವಾನ್ವಿತ ಕಾರ್ಯದರ್ಶಿಗಳಾದ ಡಾ. ಮುರಳಿಧರ್ ಭಾಗವತ್ ರವರು ಮಹಾಜನ ಕಾಲೇಜಿನ ವಿದ್ಯಾರ್ಥಿಗಳು ನೀಡಿದ ವಿಚಾರ ಪ್ರಸ್ತೂತಿಯನ್ನು ಮೆಚ್ಚಿದರು. ಜಪಾನ್ ಹಬ್ಬವನ್ನು ಮೈಸೂರಿನಲ್ಲಿ ಆಚರಿಸಿ ಎಂದು ಆಶಯ ವ್ಯಕ್ತಪಡಿಸಿದರು. ಜಪಾನಿನಂತೆಯೇ ಯಡುವರ್ಕ ಕಾನ್ಸೆಪ್ಟ್ ಅನ್ನು ನಮ್ಮ ಮೈಸೂರಿನ ಸಂಸ್ಥೆಗಳಿಗೆ ತರಭೇತಿ ನೀಡಿ ಎಂದು ಜಪಾನ್ ಮುಖ್ಯ ಅತಿಥಿಗಳಿಗೆ ವಿನಂತಿಸಿದರು.

ಕಾರ್ಯಕ್ರಮದಲ್ಲಿ ಹಿರೋಶಿಮ - ನಾಗಸಾಕಿಯಲ್ಲಿ ಉಂಟಾದ ಅಣ್ವಸ್ತ್ರ ದುರಂತ ಸಾಕ್ಷ್ಯಾಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿದ್ದು ಬಹಳ ಮೆಚ್ಚುಗೆಗೆ ಪಾತ್ರವಾಯಿತು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮು, ಕಾರ್ಯನಿರ್ವಾಹಣಾಧಿಕಾರಿಗಳಾದ ಡಾ. ಎಸ್.ಆರ್.ರಮೇಶ್ ಮತ್ತು ಕಾರ್ಯಕ್ರಮ ಆಯೋಜಿಸಿದ್ದ ಡಾ. ಲೇಪ್ಟಿನೆಂಟ್ ಇಂದ್ರಾಣಿರವರು, ಜಪಾನ್ ಹಬ್ಬ ರಾಯಭಾರಿ ಶರತ್ ರವರು ,ಕಾಲೇಜಿನ ಅಧ್ಯಾಪಕರು ಹಾಗೂ ಅಧ್ಯಾಪಕೇತರರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಕಟಣೆಯ ಕೃಪೆಗಾಗಿ